**<u>1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು</u>**

**ಸಿಸಿ. ನಂಬರ್ 19/2025**

ಫ್ರಾ.ಸಾಃ **6**

ಚಾಸಾಃ **14**

**ದಿನಾಂಕಃ23.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

| | |
|---|---|
| ಹೆಸರು | : ಶ್ರೀ ಪ್ರದೀಪ್ ಸಿಂಗ್ .ಜಿ |
| ತಂದೆಯ ಹೆಸರು | : ಗೋಪಾಲ್ |
| ವಯಸ್ಸು | :40 ವರ್ಷ |
| ಕೆಲಸ | : ಪಿಐ , ಸೈಬರ್ ಪೊಲೀಸ್ ಠಾಣೆ |
| ವಾಸ ಸ್ಥಳ | : ಕೆಜಿಎಫ್ |

**<u>ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ</u>**

ದಿಃ 06.10.2022 ರಿಂದ ದಿಃ 17.10.2023 ರವರೆಗೆ ನಂಗಲಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06.10.2023 ರಂದು ಠಾಣಾ ಪ್ರಬಾರದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಠಾಣಾ ಮೊ.ಸಂಖ್ಯೆ 201/2023 ರಲ್ಲಿ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ದೂರು ಮತ್ತು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ದೂರನ್ನು ಈಗಾಗಲೇ ನಿಪಿ1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ 10 ಎಂದು ಸಾಕ್ಷಿಯ ಸಹಿಯನ್ನು ನಿಪಿ10(ಎ) ಎಂದು ಗುರುತಿಸಲಾಯಿತು. ಸದರಿ ಪ್ರಕರಣ ಘೋರ ಪ್ರಕರಣವಾಗಿರುವುದರಿಂದ ಮುಂದಿನ ತನಿಖೆಗಾಗಿ ಚಾಸಾ 15 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಂ ಆರ್ ವಕೀಲರಿಂದಃ**

ನಿಪಿ 1 ಅನ್ನು ಎಲ್ಲಿ ಬರೆಳಚ್ಚು ಮಾಡಲಾಗಿದೆ ಎಂದರೆ ಗೊತ್ತಿಲ್ಲ. ದೂರು ಪಡೆದ ನಂತರ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ. ಎಫ್.ಐ.ಆರ್ ದಾಖಲಿಸುವ ಮೊದಲು ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿರುವುದಿಲ್ಲ. ಫಿರ್ಯಾದುದಾರರಿಗೆ ವಿಮೆ ಪರಿಹಾರ ಸಿಗಲು ಸಹಾಯ ಮಾಡುವ ಉದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೆನೆ ಎಂದರೆ ಸರಿಯಲಲ. ನಿಪಿ 1 ಅನ್ನು ಪೊಲೀಸ್ ಠಾಣೆಯಲ್ಲಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸ. ಇದೆ

ಸಹಿ/–

(ಶ್ರೀಮತಿ ರೋಹಿಣಿ. ಡಿ)

1 ನೇ ಅಪರ ಸಿ.ಜೆ ಮತ್ತು ಜೆಎಂಎಫ್ ಸಿ

ಮುಳಬಾಗಿಲು